# ಪುರಸಭೆ ಕುಂದಾಪುರ, ಉಡುಪಿ ಜಿಲ್ಲೆ

ಕ್ರ.ಸಂ:ಪುಸಕುಂ/ಕಾಮಗಾರಿ/ಟೆಂಡರ್/33-58/2008-09 ದಿನಾಂಕ : 17-10-2008

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಮೂಲಕ ಲೋಕೋಕೋಪಯೋಗಿ ಇಲಾಖೆ, ಮತ್ತು ಈ ಪುರಸಭೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನಂದರೆ, ಕುಂದಾಪುರ ಪುರಸಭೆಗೆ 2008-09 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ, ಎಸ್.ಎಫ್.ಸಿ. ವಿಶೇಷ ಅನುದಾನ, 12 ನೇ ಹಣಕಾಸು ಮತ್ತು ಪುರಸಭಾ ನಿಧಿಯಡಿಯಲ್ಲಿ ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಈ ಕೆಳಗೆ ಸೂಚಿಸಿದ ಕಾಮಗಾರಿಗಳಿಗೆ ಕರ್ನಾಟಕ ಪಾರದರ್ಶಕ ನಿಯಮ 2000 ದ ಪ್ರಕಾರ ಹಾಗೂ ಜಿಲ್ಲಾಧಿಕಾರಿಯವರ ಅನುಮತಿ ಮೇರೆಗೆ ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರಿನ ದ್ವಿ ಲಕೋಟೆ ಬಿಡ್ ಪದ್ದತಿ, ತಾಂತ್ರಿಕ ಬಿಡ್ ಹಾಗೂ ವಿತ್ತೀಯ (ಫೈನಾನ್ಸಿಯಲ್) ಬಿಡ್ಡನ್ನು ಒಳಗೊಂಡಿದೆ. ಬಿಡ್‌ಗಳನ್ನು ತಾಂತ್ರಿಕ ಬಿಡ್ ಹಾಗೂ ವಿತ್ತೀಯ ಬಿಡ್ ಎಂದು ಗುರುತು ಹಾಕಿದ ಎರಡು ಪ್ರತ್ಯೇಕ ಮೊಹರಾದ ಲಕೋಟೆಗಳಲ್ಲಿ ಎರಡು ಭಾಗಗಳಲ್ಲಿ ಸ್ವೀಕರಿಸಲಾಗುವುದು. ಈ ಶೀರೋನಾಮೆ ನಮೂದಿಸಿ ಇನ್ನೊಂದು ಮೊಹರಾದ ಲಕೋಟೆಯಲ್ಲಿಡಬೇಕು ಮತ್ತು ಬಿಡ್ಡುದಾರರ ಹೆಸರು ಹಾಗೂ ಪೂರ್ತಿ ಅಂಚೆ ವಿಳಾಸದೊಂದಿಗೆ ಈ ಕಛೇರಿಗೆ ಸಲ್ಲಿಸಬೇಕು. ಪೂರ್ತಿಗೊಳಿಸಲಾದ ಬಿಡ್ಡನ್ನು ಶೆಡ್ಯೂಲ್‌ನಲ್ಲಿ ಒಳಗೊಂಡ ವಿಶೇಷ ನಿಯಮಗಳ ಷರತ್ತುಗಳಿಗೊಳಪಟ್ಟು ದಿನಾಂಕ : 04-11-2008 ರಂದು ಸಂಜೆ 4.00 ಗಂಟೆಯವರೆಗೆ ಮುಖ್ಯಾಧಿಕಾರಿ ಅಥವಾ ಅವರಿಂದ ಅಧಿಕಾರ ಹೊಂದಿದವರು ಸ್ವೀಕರಿಸುವರು. ಈ ಕೆಳಗೆ ಸೂಚಿತ ದಿನಾಂಕದಂದು ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿರುವ ಬಿಡ್ಡುದಾರರ ವಿತ್ತೀಯ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು.

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) | ಟೆಂಡರ್ ಮಾದರಿ | ಕೆಲಸ ಪೂರ್ತಿಗೊಳಿಸಬೇಕಾದ ಅವಧಿ | ದರ್ಜೆ | ಟೆಂಡರ್ ಫಾರಂ ಬೆಲೆ |
|---|---|---|---|---|---|---|---|---|
| | ಪ್ಯಾಕೇಜ್ 1 | | | | | | | |
| 1 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳಕ್ಕೆ ಸುತ್ತಲೂ ಆವರಣ ಗೋಡೆ ರಚನೆ. (ರೂ.46.70 ಲಕ್ಷ) | 58.80 | 58,28,804.00 | 58,288.00 | ಐಟಂ ವಾರು | 3 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ | 5,000.00 |
| 2 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಕಛೇರಿ ಮತ್ತು ಕಾವಲುಗಾರನ ಕೋಣೆ ರಚನೆ. (ರೂ.4.90ಲಕ್ಷ) | | | | | | | |
| 3 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಆಂತರಿಕ ರಸ್ತೆ ಮತ್ತು ಸ್ಥಳಕ್ಕೆ ಸಂಪರ್ಕ ರಸ್ತೆ ಡಾಂಬರೀಕರಣ. (ರೂ.7.20 ಲಕ್ಷ) | | | | | | | |

| | | | | | | | | |
|---|---|---|---|---|---|---|---|---|
| | ಪ್ಯಾಕೇಜ್ 2 | | | | | | | |
| 1 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ರಸ್ತೆ ಬದಿ ಚರಂಡಿ ರಚನೆ. (ರೂ. 21.60 ಲಕ್ಷ) | 71.34 | 70,99,806.00 | 70,998.00 | ಐಟಂ ವಾರು | 3 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ | 5,000.00 |
| 2 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಲೀಚೆಟ್ ಚರಂಡಿ ರಚನೆ.<br>ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಮಳೆ ನೀರು ಹರಿಯುವ ಚರಂಡಿ ರಚನೆ.<br>ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಘನತ್ಯಾಜ್ಯ ವಸ್ತುವನ್ನು ನಿಕ್ಷೇಪ್ಷಗೊಳಿಸುವ ಸಿಮೆಂಟು ಕಾಂಕ್ರೀಟಿನ ಅಂಕಣದ ಸುತ್ತ ಚರಂಡಿ ರಚನೆ. (ರೂ. 15.25 ಲಕ್ಷ) | | | | | | | |
| 3 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಘನತ್ಯಾಜ್ಯ ವಸ್ತುವನ್ನು ನಿಕ್ಷೇಪ್ಷಗೊಳಿಸುವ ಸಿಮೆಂಟು ಕಾಂಕ್ರೀಟಿನ ಅಂಕಣ ರಚನೆ. (ರೂ. 24.70 ಲಕ್ಷ) | | | | | | | |

| | | | | | | | | |
|---|---|---|---|---|---|---|---|---|
| 4 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಭೂಗತ ತೊಟ್ಟಿ ರಚನೆ. (ರೂ. 0.69 ಲಕ್ಷ) | | | | | | | |
| 5 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಘನ ತ್ಯಾಜ್ಯ ತುಂಬುವ ಪ್ರದೇಶ ರಚನೆ ಮತ್ತು ಪ್ರದೇಶದ ಬದಿಯಲ್ಲಿ ಏರಿ ರಚನೆ. (ರೂ. 9.10 ಲಕ್ಷ) | | | | | | | |
| | ಪ್ಯಾಕೇಜ್ 3 | | | | | | | |
| 1 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಘನ ತ್ಯಾಜ್ಯ ತುಂಬುವ ಪ್ರದೇಶದಲ್ಲಿ ಕೆರೆಮಣ್ಣು ಹಾಸುವುದು ಮತ್ತು ಹೆಚ್.ಡಿ.ಪಿ.ಇ. ಲೈನರ್ ಹಾಗೂ ರಂಧ್ರಗಳಿರುವ ಪೈಪನ್ನು ಅಳವಡಿಸುವುದು. (ರೂ. 53.00 ಲಕ್ಷ) | 69.80 | 69,70,739.00 | 69,707.00 | ಐಟಂ ವಾರು | 3 ತಿಂಗಳು (ಮಳೆಗಾಲ ಹೊರತುಪಡಿಸಿ) | 1ನೇ ದರ್ಜೆ | 5,000.00 |
| 2 | ಕುಂದಾಪುರ ಪಟ್ಟಣದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ಸ್ಥಳದಲ್ಲಿ ಕೊಳಚೆ ನೀರು ಶುದ್ಧೀಕರಣಕ್ಕಾಗಿ ಆಮ್ಲಜನಕ ರಹಿತ ಕೊಳ ಮತ್ತು ಕೊಳಚೆ ನೀರು ಸ್ಥಿರೀಕರಣ ಕೊಳ ರಚನೆ. (ರೂ. 16.80 ಲಕ್ಷ) | | | | | | | |

**ಸೂಚನೆಗಳು:-**

1. ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವ ಗುತ್ತಿಗೆದಾರರು ತಮ್ಮ ಲೈಸೆನ್ಸ್ ನೊಂದಣಿ ಪತ್ರ, ಅನುಭವ ಪ್ರಮಾಣ ಪತ್ರ, ವ್ಯಾಟ್ ಮತ್ತು ಇ.ಎಂ.ಡಿ. ಹಣವನ್ನು ರಶೀದಿ ಮೂಲಕ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ನ ಡಿ.ಡಿ.ಯನ್ನು ಮುಖ್ಯಾಧಿಕಾರಿ, ಪುರಸಭೆ, ಕುಂದಾಪುರ ಇವರ ಹೆಸರಿಗೆ ತೆಗೆದು ಅರ್ಜಿ ಜೊತೆಗೆ ಲಗತ್ತಿಸಿ ಫಾರಂ ಫೀಸ್ ಪಾವತಿಸಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. ಖಾಲಿ ಟೆಂಡರ್ ಫಾರಂಗಳನ್ನು ಪಡೆಯುವ ಕೊನೆ ದಿನಾಂಕ 03-11-2008 ಸಾಯಂಕಾಲ 4.30 ಗಂಟೆ.
3. ಭರ್ತಿಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 04-11-2008 ಸಾಯಂಕಾಲ 4.30 ಗಂಟೆ.
4. ಮೊಹರು ಮಾಡಲಾದ ತಾಂತ್ರಿಕ ಬಿಡ್ಡುಗಳನ್ನು ದಿ 04-11-2008 ರಂದು ಅಥವಾ ಅನುಕೂಲವಾದ ದಿನಾಂಕ ನಿಗದಿಪಡಿಸಿ ತೆರೆಯಲಾಗುವುದು.

**ಷರತ್ತುಗಳು:-**

1. ಮೇಲಿನ ಕಾಮಗಾರಿಗೆ ಯಾವುದೇ ಸಾಮಾಗ್ರಿಗಳನ್ನು ಇಲಾಖೆಯಿಂದ ಒದಗಿಸಲಾಗುವುದಿಲ್ಲ. ಹಾಗೂ ಕಾಮಗಾರಿಗೆ ಉಪಯೋಗಿಸುವ ಸಾಮಗ್ರಿಗಳು ಐ.ಎಸ್.ಐ. ಮಾರ್ಕ್ ಹೊಂದಿರತಕ್ಕದ್ದು. ಹಾಗೂ ಕಾರ್ಯಾಲಯದ ಅಭಿಯಂತರರವರಿಂದ ಪರೀಕ್ಷೆಗೊಳಪಡಿಸಿ ನಿರ್ವಹಿಸತಕ್ಕದ್ದು.
2. ಪ್ಯಾಕೇಜ್ ಸಂಖ್ಯೆ 3 ರಲ್ಲಿ ಉಪಯೋಗಿಸುವ ಕೆರೆಮಣ್ಣು ಮತ್ತು ಹೆಚ್.ಡಿ.ಪಿ.ಇ. ಲೈನರ್‌ಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಅಭಿಯಂತರರು ತಿಳಿಸಿದ ರೀತಿಯಲ್ಲಿ ಪರೀಕ್ಷಗೊಳಪಡಿಸಿ ಗುಣಮಟ್ಟ ಕಾಯ್ದುಕೊಂಡವಸ್ತುಗಳನ್ನು ಮಾತ್ರವೇ ಉಪಯೋಗಿಸತಕ್ಕದ್ದು.
3. ಟೆಂಡರ್ ಮಂಜೂರಾತಿಯು ಸಕ್ಷಮ ಪ್ರಾಧಿಕಾರದ ಅಧಿಕಾರಕ್ಕೆ ಒಳಪಟ್ಟಿದೆ.
4. ಸರಕಾರವು ಕಾಲಕಾಲಕ್ಕೆ ನೀಡುವ ಆದೇಶಗಳಿಗನುಸಾರವಾಗಿ ಭದ್ರತಾ ಠೇವಣಿ, ರಾಜಧನ, ಆದಾಯಕರ, ಮಾರಾಟಕರ ಮತ್ತು ಕಾರ್ಮಿಕ ಕಲ್ಯಾಣ ಸುಂಕ ಇತ್ಯಾದಿಗಳನ್ನು ಬಿಲ್ಲುಗಳಲ್ಲಿ ಕಟಾಯಿಸಲಾಗುವುದು.
5. ಕಾಮಗಾರಿಯು ಪುರಸಭಾ ಕಿರಿಯ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು. ಜಿಲ್ಲಾ ನಗರಾಭಿವೃದ್ಧಿ ಕೋಶ, ಉಡುಪಿ ಇವರ ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆ.
6. ಕಾಮಗಾರಿಯ ಸ್ಥಳವನ್ನು ಹಾಗೂ ಮಾಡಬೇಕಾದ ಕೆಲಸದ ವಿವರಗಳನ್ನು ತಿಳಿದುಕೊಂಡು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು.
7. ಶೆಡ್ಯೂಲ್ ದರಕ್ಕಿಂತ ಕಡಿಮೆ ದರ ನಮೂದಿಸಿದಲ್ಲಿ ವ್ಯತ್ಯಾಸ ದರದ ಮೊತ್ತದ ಡಿ.ಡಿ.ಯನ್ನು ಟೆಂಡರಿನೊಂದಿಗೆ ಸಲ್ಲಿಸತಕ್ಕದ್ದು.
8. ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅಥವಾ ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸದಿದ್ದಲ್ಲಿ ಅಂತಹವರ ಗುತ್ತಿಗೆಯನ್ನು ರದ್ದುಪಡಿಸಿ, ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು.
9. ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಪ್ರತಿ ಪ್ಯಾಕೇಜ್ ಕಾಮಗಾರಿಗೆ ಪ್ರತ್ಯೇಕ ಮೊಹರು ಮಾಡಿದ ಲಕೋಟೆಯಲ್ಲಿ ಕಾಮಗಾರಿಯ ಹೆಸರನ್ನು ನಮೂದಿಸಿ ಸಲ್ಲಿಸತಕ್ಕದ್ದು.
10. ಷರತ್ತುಗಳನ್ನೊಳಗೊಂಡ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ.
11. ಯಾವುದೇ ಕಾರಣ ನೀಡದೇ ಟೆಂಡರ್ ಅಂಗೀಕರಿಸುವ ಹಾಗೂ ತಿರಸ್ಕರಿಸುವ ಮತ್ತು ಮುಂದೂಡುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರಿಗಿರುತ್ತದೆ.
12. ಹೆಚ್ಚಿನ ಷರತ್ತುಗಳಿಗಾಗಿ ಮತ್ತು ಮಾಹಿತಿಗಳನ್ನು ರಜಾ ದಿನಗಳನ್ನು ಹೊರತುಪಡಿಸಿ ಕಾರ್ಯಾಲಯದ ವೇಳೆಯಲ್ಲಿ ಪಡೆಯಬಹುದು.
13. ಪ್ರತಿ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು, ಪ್ರಗತಿಯ ಪ್ರತಿ ಹಂತದಲ್ಲಿ ಮತ್ತು ಮುಕ್ತಾಯಗೊಂಡ ನಂತರ ಒಟ್ಟು ಕನಿಷ್ಠ 10 ಭಾವಚಿತ್ರ ತೆಗೆಸಿ ಸಲ್ಲಿಸತಕ್ಕದ್ದು.
14. ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಮೂರನೇ ತಂಡದವತಿಯಿಂದ ಪರಿಶೀಲನಾ ವರದಿ ಪಡೆದು ಬಿಲ್ಲು ಪಾವತಿ ಮಾಡಲಾಗುವುದು.
15. ಕಾಮಗಾರಿಯು ಪೂರ್ಣಗೊಂಡ ನಂತರ ಕನಿಷ್ಠ ಎರಡು ವರ್ಷದವರೆಗೆ ಯಾವುದೇ ದುರಸ್ತಿ ಕಂಡುಬಂದಲ್ಲಿ ಸದರಿ ಕಾಮಗಾರಿಯನ್ನು ತಾವೇ ನಿರ್ವಹಣೆ ಮಾಡತಕ್ಕದ್ದು. ನಿರ್ವಹಣೆ ಮಾಡದೇ ಇದ್ದಲ್ಲಿ ಇ.ಎಂ.ಡಿ ಮತ್ತು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು.

(ರಾಯಪ್ಪ)
ಮುಖ್ಯಾಧಿಕಾರಿ,
ಪುರಸಭೆ, ಕುಂದಾಪುರ.

(ಮೋಹನದಾಸ ಶೆಣೈ)
ಅಧ್ಯಕ್ಷರು,
ಪುರಸಭೆ, ಕುಂದಾಪುರ.